1. ಕ್ರಿಯಾ ಸಂಶೋಧನೆಯ ಅರ್ಥ

2. ಕ್ರಿಯಾ ಸಂಶೋಧನೆಯ ಮಹತ್ವ

3. ಕ್ರಿಯಾ ಸಂಶೋಧನೆಯ ಗುಣಲಕ್ಷಣಗಳು

4. ಕ್ರಿಯಾ ಸಂಶೋಧನೆಯ ಹಂತಗಳು

5. ಕ್ರಿಯಾ ಸಂಶೋಧನೆಯ ಅನುಕೂಲ ಮತ್ತು ಅನಾನುಕೂಲಗಳು

6. ಸಮಸ್ಯೆಯ ಗುರುತಿಸುವಿಕೆ

7. ಅಧ್ಯಯನದ ಅಗತ್ಯತೆ

8. ಸಮಸ್ಯೆಯ ನಿರೂಪಣೆ

9. ಅಧ್ಯಯನದ ಉದ್ದೇಶಗಳು

10. ಸಮಸ್ಯೆಯ ಕಾರಣಗಳ ವಿಶ್ಲೇಷಣೆ

- **ಅಧ್ಯಯನದ ಪ್ರತಿಫಲನ :-**
- 6ನೇಯ ತರಗತಿ ವಿದ್ಯಾರ್ಥಿಗಳಲ್ಲಿ ಕನ್ನಡ ಓದುಗಾರಿಕೆಯನ್ನು ಸ್ಪಷ್ಟವಾಗಿ ಉಚ್ಛಾರ ಮಾಡುವಲ್ಲಿ ಅಸಮರ್ಥರಾಗಿರುವವರನ್ನು ಕುರಿತು ಕ್ರಿಯಾ ಸಂಶೋಧನೆ ಕೈಗೊಂಡಿದ್ದು ವಿದ್ಯಾರ್ಥಿಗಳಲ್ಲಿ ನಿರೀಕ್ಷಿತ ದೊರೆಯುವಲ್ಲಿ ಯಶಸ್ವಿಯಾಗಿದ್ದೇನೆ. ಈ ಮೂಲಕ ಅವರಲ್ಲಿದ್ದ ದೋಷವು ನಿವಾರಣೆಯಾಗಿದೆ.
- ವಿದ್ಯಾರ್ಥಿಯು ಕನ್ನಡ ವರ್ಣಮಾಲೆಯ ಪರಿಜ್ಞಾನವನ್ನು ಬೆಳೆಸಿಕೊಂಡಿದ್ದಾನೆ
- ವಿಯಾರ್ಥಿಗಳಲ್ಲಿ ಕಾಗುಣಿತಾಕ್ಷರಗಳನ್ನು ಪರಿಚಯಿಸುವುದು
- ಪ್ರತಿಯೊಂದು ಅಕ್ಷರಗಳನ್ನು ಜೋಡಿಸಿಕೊಂಡು ಒಂದು ಪದವನ್ನು ಓದುವಷ್ಟು ಸಮರ್ಥರಾಗಿದ್ದಾರೆ
- ವಿದ್ಯಾರ್ಥಿಯು ಉಕ್ತಲೇಖನವನ್ನು ಬರೆಯುವಲ್ಲಿ ಸಮರ್ಥನಾಗಿದ್ದಾನೆ

- **ಅಧ್ಯಯನದ ಫಲಿತಾಂಶ :-**
- ತಾಲೂಕು ಮಟ್ಟದ ಶಾಸಕರ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಸೊಪ್ಪಿನಕೇರಿ. ಶಿಕಾರಿಪುರ ಇಲ್ಲಿಯ 6ನೇ ತರಗತಿಯ ವಿದ್ಯಾರ್ಥಿಗಳಲ್ಲಿನ ಕನ್ನಡ ಭಾಷಾ ಕೌಶಲಗಳಲ್ಲಿ ಒಂದಾದ ಓದುಗಾರಿಕೆಯು ಸ್ಪಷ್ಟವಾಗಿ ಉಚ್ಛಾರ ಮಾಡುವಲ್ಲಿ ಅಸಮರ್ಥರಾಗಿದ್ದು ನಂತರದ ದಿನಗಳ ಅಥವಾ ಅವಧಿಗಳ ಮಾರ್ಗದರ್ಶನ ಮತ್ತು ಚಟುವಟಿಕೆಯ ನಂತರ ವಿದ್ಯಾರ್ಥಿಯು ಕನ್ನಡ ಭಾಷಾ ಕೌಶಲವಾದ ಓದುಗಾರಿಕೆಯನ್ನು ಸೂಕ್ತವಾಗಿ ಅರ್ಥಪೂರ್ಣವಾಗಿ ಉಚ್ಛಾರ ಮಾಡಲು ಮತ್ತು ಒಂದೊಂದೇ ಅಕ್ಷರಗಳನ್ನು ಸೂಕ್ತ ಸ್ವರಭಾವದೊಂದಿಗೆ ಉಚ್ಛಾರ ಮಾಡುವಲ್ಲಿ ಸಫಲರಾದರು.

- ನಂತರ ಈ ಅಸಮಾಧಾನ ಸ್ಥಿತಿಗೆ ಅನುಗುಣವಾಗಿ ಚಟುವಟಿಕೆ ರೂಪಿಸಿಕೊಂಡು ಪ್ರತಿದಿನ ಕಾಪಿ ರೈಟಿಂಗ್ ಪುಸ್ತಕದಲ್ಲಿ ಒತ್ತಕ್ಷರಗಳು, ಗಾದೆ ಮಾತು, ಸ್ವರಗಳು ಮತ್ತು ಕಠಿಣ ಪದಗಳನ್ನು ಹಾಕಿಕೊಳ್ಳುವುದರ ಮೂಲಕ ಅವರಲ್ಲಿ ಆಲಿಸುವಿಕೆ ಮತ್ತು ಬರವಣಿಗೆಯ ಜೊತೆಗೆ ಮಾತುಗಾರಿಕೆಯ ಕೌಶಲವನ್ನು ಬೆಳೆಸುವುದಾಗಿದೆ.
- ನಂತರ ನೋಟ್ ಬುಕ್ ಮೇಲೆ ವರ್ಣಮಾಲೆಯನ್ನು ಬರೆಸುವ ಚಟುವಟಿಕೆಯನ್ನು ಮಾಡಲಾಯಿತು ನಂತರ ಅವರು ಬರೆದ ವರ್ಣಮಾಲೆಯನ್ನು ಪರೀಕ್ಷಿಸುವುದರ ಮೂಲಕ ಮತ್ತಷ್ಟು ಅವರಲ್ಲಿ ದೋಷಗಳು ಕಂಡು ಬಂದ ಪರಿಣಾಮ ಪುನಃ ಬರೆದು ತರುವಂತೆ ಸೂಚಿಸಿದಳು.

- **ವಿಶ್ಲೇಷಣೆ ಮತ್ತು ಅರ್ಥೈಸುವಿಕೆ** :-
- ಕ್ರಿಯಾ ಸಂಶೋಧನೆಯಲ್ಲಿ 6ನೇ ತರಗತಿಯ ವಿದ್ಯಾರ್ಥಿಗಳಲ್ಲಿ ಕೇವಲ 3 ಜನ ವಿದ್ಯಾರ್ಥಿಗಳು ಕನ್ನಡ ಓದುಗಾರಿಕೆಯನ್ನು ಸ್ಪಷ್ಟವಾಗಿ ಓದುವಲ್ಲಿ ಅಸಮರ್ಥರಾಗಿದ್ದಾರೆ. ಇದನ್ನು ಮೊದಲ ಬಾರಿಗೆ ಅವರಿಗೆ ಮೆರವಣಿಗೆ ಎಂಬ ಗದ್ಯ ಭಾಗವನ್ನು ಓದಿಸಿದಾಗ ಅದರಲ್ಲಿ ಕಂಡುಬಂದಂತಹ ಅಸಮರ್ಥತತೆ ಎಂದರೆ ಕನ್ನಡ ಭಾಷೆಯನ್ನು ಸ್ಪಷ್ಟವಾಗಿ ಓದುವಲ್ಲಿ ಅಸಮರ್ಥರಾಗಿದ್ದಾರೆ. ಇದಕ್ಕೆ ಪೂರಕವಾಗಿ ಸಂಬಂಧಿಸಿದಂತೆ ಹಲವಾರು ಚಟುವಟಿಕೆ ಬಿಟ್ಟು ಅವರಲ್ಲಿ ಓದುಗಾರಿಕೆಯ ಕೌಶಲವನ್ನು ಬೆಳೆಸುವುದಾಗಿದೆ. ಆದರೆ ಇಲ್ಲಿ ನಾನು ಪಾಠ ಓದಿಸಿದಾಗ ಕೇವಲ 3 ಮಂದಿ ಮಾತ್ರ ಕನ್ನಡವನ್ನು ಸ್ಪಷ್ಟವಾಗಿ ಓದುವಲ್ಲಿ ಅಸಮರ್ಥರಾಗಿದ್ದಾರೆಂಬುದನ್ನು ಅರಿತುಕೊಂಡು ಈ ಮೂಲಕ ಅವರನ್ನು ನನ್ನ ಕ್ರಿಯಾ ಸಂಶೋಧನೆಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ.

- **ಹಂತ – 9**
- **ಮಧ್ಯವರ್ತನಾ ಚಟುವಟಿಕೆಗಳ ಮೌಲ್ಯಮಾಪನ :-**
- ಅಸಮಾಧಾನ ಪರಿಸ್ಥಿತಿಯ ತೀವ್ರತೆ ಕಡಿಮೆ ಮಾಡುವುದಕ್ಕಾಗಿ ತೆಗೆದುಕೊಂಡ ಮಧ್ಯವರ್ತನಾ ಚಟುವಟಿಕೆಗಳು ಮೊದಲಿದ್ದ ರೀತಿಯಲ್ಲಿ ಮಾಡುವ ಬದಲಾವಣೆಗಳನ್ನು ವಸ್ತುನಿಷ್ಠವಾಗಿ ಲೇಪನ ಮಾಡುವ ಕ್ರಿಯೆಯಾಗಿದೆ.
- ಮಧ್ಯವರ್ತನಾ ಚಟುವಟಿಕೆಗಳು ಸಂಪೂರ್ಣ ಯಶಸ್ವಿಯೇ ಭಾಗಶಃ ಯಶಸ್ವಿಯೇ ಎಷ್ಟರ ಮಟ್ಟಿಗೆ ಫಲಕಾರಿಯಾಗಿವೆ ಎಂಬುದನ್ನು ತಿಳಿಯಲು ಮೌಲ್ಯಮಾಪನ ಅವಶ್ಯಕತೆಯಿದೆ.
- ಕ್ರಿಯಾ ಸಂಶೋಧನೆಯ ಸಂಧರ್ಭದಲ್ಲಿ ಮೌಲ್ಯಮಾಪನ ಕೊನೆಯಲ್ಲಿ ಮಾಡುವ ಚಟುವಟಿಕೆಯಲ್ಲಿ ಪ್ರಕ್ರಿಯೆಯು ಜೊತೆಯಾಗಿಯೇ ಸಾಗುತ್ತದೆ.
- ನಾನು ಮೌಲ್ಯಮಾಪನ ತಂತ್ರಗಳಾದ ಬರೆದು ಓದು, ಗಾದೆ ಮಾತುಗಳನೇ ಬರೆಸುವುದು. ಜೊತೆಗೆ ಉಕ್ತಲೇಖನ ಕೊಡುವುದನ್ನು ಮಾಡುವುದರ ಮುಂತಾದ ಚಟುವಟಿಕೆಗಳನ್ನು ಕೈಗೊಂಡಿದ್ದೇನೆ.

| | | | | |
|---|---|---|---|---|
| 6 | | ಕಾಫಿ ರೈಟಿಂಗ್ ಪುಸ್ತಕದಲ್ಲಿ ಗಾದೆ ಮಾತು ಬರೆಸುವ ಚಟುವಟಿಕೆ | ಶಿಕ್ಷಕರು ಮಕ್ಕಳಿಗೆ ಗಾದೆ ಮಾತುಗಳನ್ನು 2 ಗೆರೆಯ ನೋಟ್ ಬುಕ್ ಮೇಲೆ ಹಾಕಿ ಕೊಟ್ಟು ಬರೆಸುವರು | |
| 7 | | ಕಾಫಿ ರೈಟಿಂಗ್ ಪುಸ್ತಕದಲ್ಲಿ ಪಾಠವನ್ನು ಬರೆಸುವ ಚಟುವಟಿಕೆ | ಶಿಕ್ಷಕರು ಕಾಫಿ ರೈಟಿಂಗ್ ಪುಸ್ತಕದಲ್ಲಿ ಪಾಠದ ಸಾಲುಗಳನ್ನು ಬರೆದು ಕೊಟ್ಟು ಬರೆಸುವರು | |
| 8 | | ಪರೀಕ್ಷೆಯ ಹಾಳೆಯಲ್ಲಿ ಕಠಿಣ ಪದಗಳನ್ನು ಬರೆಸುವ ಚಟುವಟಿಕೆ | ಶಿಕ್ಷಕರು ಕಠಿಣ ಪದಗಳನ್ನು ಹಾಕಿಕೊಟ್ಟು ಅದನ್ನು 5 ಬಾರಿ ಬರೆಯುವಂತೆ ಸೂಚಿಸುವರು | |
| 9 | | ಕಾಫಿ ರೈಟಿಂಗ್ ಮೇಲೆ ಕಠಿಣ ಪದಗಳನ್ನು ಬರೆಸುವ ಚಟುವಟಿಕೆ | ಕಾಫಿ ರೈಟಿಂಗ್‌ನಲ್ಲಿ ಕಠಿಣ ಪದಗಳನ್ನು ಹಾಕಿಕೊಟ್ಟು ಅದನ್ನು 5 ಬಾರಿ ಬರೆಸುವರು | |
| 10 | | ಕಾಫಿ ರೈಟಿಂಗ್ ಪುಸ್ತಕದಲ್ಲಿ ಗಾದೆ ಮಾತುಗಳನ್ನು ಬರೆಸುವ ಚಟುವಟಿಕೆ | ಶಿಕ್ಷಕರು ಗಾದೆ ಮಾತುಗಳನ್ನು ಹಾಕಿಕೊಟ್ಟು ಬರೆಸುವರು | |

| ಕ್ರ.ಸಂ | ದಿನಾಂಕ | ಚಟುವಟಿಕೆ | ಚಟುವಟಿಕೆಯ ಪರಿಣಾಮ | ಕ್ರ.ಸಂ |
|---|---|---|---|---|
| 1 | | ಪೂರ್ವ ಪರೀಕ್ಷೆ | 6ನೇ ತರಗತಿಯ ಎಲ್ಲಾ ಮಕ್ಕಳಿಗೆ ಒಂದು ಗದ್ಯ ಭಾಗವನ್ನು ಓದಿಸಲಾಯಿತು | 1 |
| 2 | | ಕಪ್ಪು ಹಲಗೆಯ ಮೇಲೆ ಉಕ್ತಲೇಖನ ಬರೆಯುವ ಚಟುವಟಿಕೆ | ಶಿಕ್ಷಕರು ಕಪ್ಪು ಹಲಗೆಯ ಮೇಲೆ ಉಕ್ತಲೇಖನವನ್ನು ಬರೆದು ತೋರಿಸುವರು ವಿದ್ಯಾರ್ಥಿಗಳು ಅದನ್ನು ಆಲಿಸಿದರು | 2 |
| 3 | | ಕಾಪಿ ರೈಟಿಂಗ್ ಮೇಲೆ ಕಠಿಣ ಪದಗಳು ಹಾಗೂ ಕಾಗುಣಿತಾಕ್ಷರಗಳನ್ನು ಬರೆಸುವ ಚಟುವಟಿಕೆ | ಶಿಕ್ಷಕರು ಶಾಲೆಯಲ್ಲಿ 2 ಗೆರೆಯ ನೋಟ್ ಬುಕ್ ಮೇಲೆ ಗಾದೆ ಮಾತು ಹಾಕಿ ಕೊಟ್ಟರು ಮತ್ತು ವಿದ್ಯಾರ್ಥಿಗಳು ಬರೆದರು | 3 |
| 4 | | 2 ಗೆರೆಯ ನೋಟ್ ಬುಕ್ ಮೇಲೆ ಗಾದೆ ಮಾತು ಬರೆಸುವ ಚಟುವಟಿಕೆ | ಶಿಕ್ಷಕರು ಶಾಲೆಯಲ್ಲಿ 2 ಗೆರೆಯ ನೋಟ್ ಬುಕ್ ಮೇಲೆ ಗಾದೆ ಮಾತು ಹಾಕಿ ಕೊಟ್ಟರು ಮತ್ತು ವಿದ್ಯಾರ್ಥಿಗಳು ಬರೆದರು | 4 |
| 5 | | ಕಾಪಿ ರೈಟಿಂಗ್ ಮೇಲೆ ವರ್ಣಮಾಲೆಯನ್ನು ಬರೆಸುವ ಚಟುವಟಿಕೆ | ಶಿಕ್ಷಕರು ಕಪ್ಪು ಹಲಗೆಯ ಮೇಲೆ ಬರೆದು ತೋರಿಸುವರು ಹಾಗೂ ವಿದ್ಯಾರ್ಥಿಗಳು ಬರೆಯುವರು | 5 |

- ಹಂತ – 8
- ಮಧ್ಯವರ್ತನಾ ಟುವಟಿಕೆಗಳ ಅನುಷ್ಠಾನ :- ಕಾರ್ಯ ಕೋಷ್ಟಕದಲ್ಲಿ ಸೂಚಿಸಿದ ಚಟುವಟಿಕೆಗಳನ್ನು ಅದೇ ಕ್ರಮದಲ್ಲಿ ಅನುಷ್ಠಾನಗೊಳಿಸಿ ಪ್ರತಿದಿನ ಚಟುವಟಿಕೆಗಳನ್ನು ಈ ಕೆಳಗೆ ಸೂಚಿಸಿದ ದಿನಚರಿಯ ನಮೂನೆಯಲ್ಲಿ ದಾಖಲಿಸುತ್ತೇನೆ.

| | | | | |
|---|---|---|---|---|
| 8 | ಕಾಪಿ ರೈಟಿಂಗ್ ಪುಸ್ತಕದಲ್ಲಿ ಗಾದೆ ಮಾತು ಬರೆಸುವ ಚಟುವಟಿಕೆ | ನಾನು ಮತ್ತು ನನ್ನ ವಿದ್ಯಾರ್ಥಿಗಳು | ಶಾಲೆ | 1 |
| 9 | ಕಾಪಿ ರೈಟಿಂಗ್‌ನಲ್ಲಿ ಹಲವು ಕಠಿಣ ಪದಗಳನ್ನು ಬರೆಸುವ ಚಟುವಟಿಕೆ | ನಾನು ಮತ್ತು ನನ್ನ ವಿದ್ಯಾರ್ಥಿಗಳು | ಶಾಲೆ | 1 |
| 10 | ಕಪ್ಪು ಹಲಗೆ ಮೇಲೆ ಮಕ್ಕಳಿಂದ 2 ಅಥವಾ 3 ಅಕ್ಷರಗಳನ್ನು ಬರೆಸುವ ಚಟುವಟಿಕೆ | ನಾನು ಮತ್ತು ನನ್ನ ವಿದ್ಯಾರ್ಥಿಗಳು | ಶಾಲೆ | 1 |
| 11 | ನೋಟ್ ಪುಸ್ತಕದಲ್ಲಿ ಉಕ್ತಲೇಖನವನ್ನು ಬರೆದು ತೋರಿಸುವ ಚಟುವಟಿಕೆ | ನಾನು ಮತ್ತು ನನ್ನ ವಿದ್ಯಾರ್ಥಿಗಳು | ಶಾಲೆ | 1 |
| 12 | A4 ಹಾಳೆಯ ಮೇಲೆ ಕಠಿಣ ಪದಗಳನ್ನು ಬರೆಸುವ ಚಟುವಟಿಕೆ | ನಾನು ಮತ್ತು ನನ್ನ ವಿದ್ಯಾರ್ಥಿಗಳು | ಶಾಲೆ | 1 |
| 13 | ತರಗತಿಯಲ್ಲಿ ಟಂಗ್ ಟ್ವಿಸ್ಟರ್‌ಗಳನ್ನು ಹೇಳಿಸುವ ಚಟುವಟಿಕೆ | ನಾನು ಮತ್ತು ನನ್ನ ವಿದ್ಯಾರ್ಥಿಗಳು | ಶಾಲೆ | 1 |
| 14 | ನೋಟ್ ಪುಸ್ತಕದಲ್ಲಿ ಕಾಗುಣಿತಾಕ್ಷರಗಳನ್ನು ಬರೆಸುವ ಚಟುವಟಿಕೆ | ನಾನು ಮತ್ತು ನನ್ನ ವಿದ್ಯಾರ್ಥಿಗಳು | ಶಾಲೆ | 1 |

| | | | | |
|---|---|---|---|---|
| 1 | ಪೂರ್ವ ಪರೀಕ್ಷೆ | ನಾನು ಮತ್ತು ನನ್ನ ವಿದ್ಯಾರ್ಥಿಗಳು | ಶಾಲೆ | 1 |
| 2 | ಕಪ್ಪು ಹಲಗೆಯ ಮೇಲೆ ಜೋಡುಗೆರೆ ಹಾಕಿ ಉಕ್ತಲೇಖನ ಬರೆಸುವ ಚಟುವಟಿಕೆ | ನಾನು ಮತ್ತು ನನ್ನ ವಿದ್ಯಾರ್ಥಿಗಳು | ಶಾಲೆ | 1 |
| 3 | ನೋಟ್ ಬುಕ್(ಕಾಪಿ ರೈಟಿಂಗ್)ನಲ್ಲಿ ಗಾದೆ ಮಾತು ಬರೆಸುವ ಚಟುವಟಿಕೆ | ನಾನು ಮತ್ತು ನನ್ನ ವಿದ್ಯಾರ್ಥಿಗಳು | ಶಾಲೆ | 1 |
| 4 | ಕಪ್ಪು ಹಲಗೆಯ ಮೇಲೆ ವರ್ಣಮಾಲೆಯನ್ನು ಪರಿಚಯಿಸುವ ಚಟುವಟಿಕೆ | ನಾನು ಮತ್ತು ನನ್ನ ವಿದ್ಯಾರ್ಥಿಗಳು | ಶಾಲೆ | 1 |
| 5 | ಕಾಪಿ ರೈಟಿಂಗ್‌ನಲ್ಲಿ ವರ್ಣಮಾಲೆಯನ್ನು ಬರೆಸುವ ಚಟುವಟಿಕೆ | ನಾನು ಮತ್ತು ನನ್ನ ವಿದ್ಯಾರ್ಥಿಗಳು | ಶಾಲೆ | 1 |
| 6 | ನೋಟ್ ಬುಕ್‌ನಲ್ಲಿ ಗಾದೆ ಮಾತು ಬರೆಸುವ ಚಟವಟಿಕೆ | ನಾನು ಮತ್ತು ನನ್ನ ವಿದ್ಯಾರ್ಥಿಗಳು | ಶಾಲೆ | 1 |
| 7 | ಕನ್ನಡ ಬರವಣಿಗೆಯಲ್ಲಿನ ದೋಷಗಳನ್ನು ಪತ್ತೆ ಹಚ್ಚುವುದು ಮತ್ತು ಸರಿಪಡಿಸುವ ಚಟುವಟಿಕೆ | ನಾನು ಮತ್ತು ನನ್ನ ವಿದ್ಯಾರ್ಥಿಗಳು | ಶಾಲೆ | 1 |

- **ಹಂತ – 5**

**ಸೈದ್ಧಾಂತಿಕ ನೆಲೆಗಟ್ಟಿನ ಆದ್ಯತೀಕರಣ** :– ನಾನು ರಚಿಸಿರುವ ಎರಡು ಸೈದ್ಧಾಂತಿಕ ನೆಲೆಗಟ್ಟಿನ ಪೈಕಿ ಮೊದಲನೆಯದು ನನ್ನ ಕಾರ್ಯ ವ್ಯಾಪ್ತಿಗೆ ಬರುವುದರಿಂದ ಚಟುವಟಿಕೆಗಳನ್ನು ಆಲೋಚಿಸುವ ಮೂಲಕ ಪರಿಹಾರ ಹುಡುಕಬಲ್ಲೆ. ಎರಡನೆಯದು ನನ್ನ ಕಾರ್ಯ ವ್ಯಾಪ್ತಿಗೆ ಬರುವುದಿಲ್ಲ ಆದ್ದರಿಂದ ಕ್ರಿಯಾ ಸಂಶೋಧನೆಗೆ ಮೊದಲನೆಯ ಸೈದ್ಧಾಂತಿಕ ನೆಲೆಗಟ್ಟನು ಆದ್ಯತೀಕರಿಸುತ್ತೇನೆ.

- **ಹಂತ – 6**

**ಕ್ರಿಯಾ ಆಧಾರ ಕಲ್ಪನೆಯ ರಚನೆ** :– "ಸೂಕ್ತ ಅವಕಾಶಗಳನ್ನು ಸೃಷ್ಟಿಸಿ ಉತ್ತೇಜನ ನೀಡುವಲ್ಲಿ ವಿದ್ಯಾರ್ಥಿಗಳಲ್ಲಿರುವ ದೋಷವನ್ನು ನಿವಾರಿಸಲು ಸಾಧ್ಯವಾಗಬಹುದು".

- **ಸೈದ್ಧಾಂತಿಕ ನೆಲೆಗಟ್ಟಿನ ರಚನೆ** :– ಇದನ್ನು 2. 5. 13. 16. ಇವುಗಳನ್ನು ಪರಿಹರಿಸಲು ಆಗದೆಂದು ಗುರುತಿಸಿ ಎರಡನೇ ಸೈದ್ಧಾಂತಿಕ ನೆಲೆಗಟ್ಟನ್ನು ರಚಿಸಿದ್ದೇನೆ.
- ಪ್ರಾಯಶಃ ಮಗುವಿನ ಕಣ್ಣಿನ ದೋಷವಿರುವುದು. ಮನೆಯಲ್ಲಿ ಪೋಷಕರು ಮಗುವಿನ ಆರೋಗ್ಯದ ಬಗ್ಗೆ ಕಲಿಕೆಯ ಬಗ್ಗೆ ಕಾಳಜಿ ವಹಿಸದಿರುವುದು ಮಗುವು ಆಗಾಗ ಶಾಲೆಗೆ ಗೈರು ಹಾಜರಾಗುವುದು ಮಗುವಿಗೆ ಮನೆಯಲ್ಲಿ **ಹೋಂ ವರ್ಕ್** ಮಾಡಲು ಕೂರಿಸಿಕೊಳ್ಳದಿರುವುದು ಇಲ್ಲವೇ ಮಾಡಲು ಹೇಳದಿರುವುದು ಹಾಗೂ ಪೋಷಕರಿಗೆ ಈ ಭಾಷೆಯ ಜ್ಞಾನ ಇಲ್ಲದಿರುವುದು. ಈ ಕಾರಣಗಳು ಸಹ ಅಸಮಾಧಾನ ಸ್ಥಿತಿಗೆ ಕಾರಣವಾಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

**ಹಂತ** – 4

- **ಸೈದ್ಧಾಂತಿಕ ನೆಲೆಗಟ್ಟುಗಳ ರಚನೆ** :–
- **ಸೈದ್ಧಾಂತಿಕ ನೆಲೆಗಟ್ಟು – ಒಂದು** – ಸಂಭವನೀಯ ಕಾರಣಗಳಲ್ಲಿ ಈ ಕಾರಣಗಳನ್ನಾಧರಿಸಿ ಅಂದರೆ 1. 3. 4. 6. 10. 11. 12. 14. 17. ಇವುಗಳನ್ನಾಧರಿಸಿ ಮೊದಲನೆಯ ಸೈದ್ಧಾಂತಿಕ ನೆಲೆಗಟ್ಟುಗಳನ್ನು ರಚಿಸಲಾಗಿದೆ.
- ಬಹುಶಃ ಹಿಂದಿನ ತರಗತಿಯಲ್ಲಿ ಕನ್ನಡ ಭಾಷೆ ಬೋಧಿಸುವ ಶಿಕ್ಷಕರು ಓದುಗಾರಿಕೆಯ ಕಡೆಗೆ ಗಮನ ಹರಿಸದೇ ಇರುವುದು. ಮಗು ಕಲಿಯಲು ಆಸಕ್ತಿ ತೋರದಿರುವುದು ಶಿಕ್ಷಕರು ಮಗುವಿಗೆ ಅರ್ಥವಾಗದ ರೀತಿಯಲ್ಲಿ ಹೇಳದಿರುವುದು ಶಿಕ್ಷಕರು ಮಗುವಿನ ಓದುವ ಶೈಲಿ ಗಮನಿಸದಿರುವುದು. ಒತ್ತು ಕೊಟ್ಟು ಹೇಲದಿರುವುದು ಶಿಕ್ಷಕರು ವಿದ್ಯಾರ್ಥಿಗಳಿಗೆ ಪುನರ್ಬಲನ ನೀಡದಿರುವುದು. ಈ ಎಲ್ಲಾ ಕಾರಣಗಳು ಅಸಮಾಧಾನಕ್ಕೆ ಕಾರಣವಾಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

- ಹಿಂದಿನ ತರಗತಿಯಲ್ಲಿ ಓದುಗಾರಿಕೆಗೆ ಸಂಬಂಧಿಸಿದಂತೆ ಶಿಕ್ಷಕರ ಮಾರ್ಗದರ್ಶನ ಸಿಗದಿರುವುದು
- ನಕಲು ಪುಸ್ತಕಗಳ ಬಳಕೆಯಿಲ್ಲದಿರುವುದು
- ಅರ್ಥವಾಗುವಂತೆ ಬರೆಯುವಲ್ಲಿ ಮಗುವಿನ ನಿರಾಸಕ್ತಿ
- ಮಗುವಿನ ನಿರಂತರ ಹಾಜರಾತಿ ಕೊರತೆಯಿರಬಹುದು
- ಮಗು ನಿರಂತರವಾಗಿ ಮನೆಗೆಲಸ ಮಾಡದೇ ಇರಬಹುದು
- ಶಿಕ್ಷಕರು ಪುನರ್ಬಲನ ಮಾಡದಿರುವುದು
- ಶಿಕ್ಷಕರು ಬೋಧನಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಳ್ಳದಿರುವುದು
- ಕನ್ನಡ ಅಕ್ಷರಗಳ ಕಲ್ಪನೆಯಿಲ್ಲದಿರುವುದು

**ಹಂತ – 3 – ಸಂಭವನೀಯ ಕಾರಣಗಳ ಪಟ್ಟಿ :-**

- ಹಿಂದಿನ ತರಗತಿಯಲ್ಲಿ ಸಾಕಷ್ಟು ತರಬೇತಿ ಆಗದಿರುವುದು
- ಕಣ್ಣಿನ ದೋಷವಿರುವುದು
- ಕಲಿಕೆಯಲ್ಲಿ ಆಸಕ್ತಿ ತೋರದಿರುವುದು
- ಓದಲು ಸೂಚಿಸಿದಾಗ ಓದದೇ ಇರುವುದು
- ಮನೆಯಲ್ಲಿ ಸೂಕ್ತ ಮಾರ್ಗದರ್ಶನದ ಸಹಾಯದ ಕೊರತೆ
- ಕನ್ನಡ ಅಕ್ಷರಗಳನ್ನು ಓದುವ ಸರಿಯಾದ ಕ್ರಮ ತಿಳಿಯದಿರುವುದು
- ಕಾಗುಣಿತದ ಕಲ್ಪನೆಯಿಲ್ಲದಿರುವುದು
- ಮಗುವಿನ ಮಾತೃಭಾಷೆ ಬೇರೆಯಾಗಿರುವುದು
- ಲೇಖನ ಚಿಹ್ನೆಗಳ ಪರಿಕಲ್ಪನೆಯಿಲ್ಲದಿರುವುದು

- **ಕ್ರಿಯಾ ಸಂಶೋಧನೆಯ ಕಾರ್ಯ :-**
- **ಹಂತ – 1**
- **ಅಸಮಾಧಾನ ಸ್ಥಿತಿ ಗುರುತಿಸುವುದು** :- ಕನ್ನಡ ಭಾಷೆಯಲ್ಲಿ 6ನೇ ತರಗತಿ ಮಕ್ಕಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಕನ್ನಡ ಭಾಷಾ ಕೌಶಲಗಳಲ್ಲಿ ಒಂದಾದ ಓದುಗಾರಿಕೆಯಲ್ಲಿ ಹಲವಾರು ದೋಷಗಳನ್ನು ಹೊಂದಿದ್ದಾರೆ.

- **ಹಂತ – 2**
- **ಅಸಮಾಧಾನ ಸ್ತೀತಿಯ ವಿಶ್ಲೇಷಣೆ** :- ತಾಲ್ಲೂಕು ಮಟ್ಟದ ಶಾಸಕರ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಸೊಪ್ಪಿನಕೇರಿ. ಶಿಕಾರಿಪುರದಲ್ಲಿ ವ್ಯಾಸಾಂಗ ಮಾಡುತ್ತಿರುವ 6ನೇ ತರಗತಿಯ ವಿದ್ಯಾರ್ಥಿಗಳಲ್ಲಿ 3ಜನ ವಿದ್ಯಾರ್ಥಿಗಳು ಕನ್ನಡ ಭಾಷೆಯನ್ನು ತಪ್ಪಿಲ್ಲದಂತೆ ಓದುವಲ್ಲಿ ಅಸಮರ್ಥರಾಗಿದ್ದಾರೆ.

- **ಸಂಭವನೀಯ ಕಾರಣಗಳ ಪಟ್ಟಿ** :–
- ಶಿಕ್ಷಕರು ಶಾಲಾ ತರಗತಿಯ ಸನ್ನಿವೇಶದಲ್ಲಿ ಸೂಕ್ತ ಕಲಿಕಾ ವಾತಾವರಣ ಸೃಷ್ಟಿಯಾಗದೇ ಇರುವುದು
- ವಿದ್ಯಾರ್ಥಿಗಳು ಆಲಿಸುವಿಕೆ ಮತ್ತು ಓದುಗಾರಿಕೆ ಕೌಶಲ ಹೊಂದದರುವುದು
- ಶಿಕ್ಷಕರು ಬೋಧನಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳನ್ನು ಸಕ್ರಿಯವಾಗಿ ಪಾಲ್ಗೊಳ್ಳದೇ ಇರುವುದು
- ಶಿಕ್ಷಕರು ತರಗತಿಯಲ್ಲಿ ಮಕ್ಕಳ ಓದುಗಾರಿಕೆಯ ಕಡೆ ಗಮನ ಕೊಡದಿರುವುದು
- ವಿದ್ಯಾರ್ಥಿಗಳಿಗೆ ವರ್ಣಮಾಲೆಯ ಬಗ್ಗೆ ತಿಳುವಳಿಕೆಯಿಲ್ಲದಿರುವುದು
- ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ಆಸಕ್ತಿ ಇಲ್ಲದಿರುವುದು
- ವಿದ್ಯಾರ್ಥಿಗಳಿಗೆ ಕಾಗುಣಿತದ ಪರಿಕಲ್ಪನೆಯಿಲ್ಲದಿರುವುದು
- ವಿದ್ಯಾರ್ಥಿಗಳಿಗೆ ಕನ್ನಡ ಅಕ್ಷರಗಳನ್ನು ಬರೆಯುವ ಸರಿಯಾದ ಕ್ರಮ ತಿಳಿಯದಿರುವುದು
- ಲೇಖನ ಚಿಹ್ನೆಗಳ ಪರಿಕಲ್ಪೆಯಿಲ್ಲದಿರುವುದು
- ಓದುಗಾರಿಕೆಯಲ್ಲಿ ನಿರಾಸಕ್ತಿ
- ವಿದ್ಯಾರ್ಥಿಗಳಲ್ಲಿ ಏಕಾಗ್ರತೆಯ ಕೊರತೆ

4. **ಸಮಸ್ಯೆಯ ನಿರೂಪಣೆ** :– 6 ನೇ ತರಗತಿಯ ವಿದ್ಯಾರ್ಥಿಗಳಲ್ಲಿನ ಓದುಗಾರಿಕೆಯ ಸಮಸ್ಯೆ
5. **ಅಧ್ಯಯನದ ಉದ್ದೇಶಗಳು** :–

- ವಿದ್ಯಾರ್ಥಿಗಳಲ್ಲಿ ಗುರುತಿಸಿದ ದೋಷ ನಿವಾರಣೆ ಮಾಡುವುದು
- ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಹೆಚ್ಚಿಸುವುದು
- ವಿದ್ಯಾರ್ಥಿಗಳಲ್ಲಿ ಭಾಷಾ ಪ್ರಯೋಗಾಲಯ ಉಪಕರಣಗಳ ಉಪಯೋಗಗಳ ಬಗ್ಗೆ ತಿಳಿಸುವುದು
- ವಿದ್ಯಾರ್ಥಿಗಳಲ್ಲಿ ಓದುಗಾರಿಕೆಯ ಕೌಶಲವನ್ನು ಬೆಳೆಸುವುದು
- ವಿದ್ಯಾರ್ಥಿಗಳಗೆ ಹಲವಾರು ಚಟುವಟಿಕೆ ನೀಡುವುದರ ಮೂಲಕ ವಿದ್ಯಾರ್ಥಿಗಳಲ್ಲಿನ ದೋಷ ನಿವಾರಣೆ ಮಾಡುವುದು
- ತರಗತಿಯಲ್ಲಿ ವಿದ್ಯಾರ್ಥಿಗಳು ಆಸಕ್ತಿಯುತವಾಗಿ ಭಾಗವಹಿಸುವಂತೆ ಮಾಡುವುದು

2. **ಸಮಸ್ಯೆಯ ಗುರುತಿಸುವಿಕೆ :-**

- ವಿದ್ಯಾರ್ಥಿಗಳು ಕನ್ನಡ ಭಾಷಾ ಕೌಶಲಗಳಲ್ಲಿ ಒಂದಾದ **ಓದುಗಾರಿಕೆ** ಕೌಶಲವಾದ ಅಸ್ಪಷ್ಟತೆಯ ಉಚ್ಚಾರಣಾತೆಯ ನ್ಯೂನತೆಯ ಪಾಠವನ್ನು ಓದಿಸುವುದರ ಮೂಲಕ ಹಾಗೂ ದಿನನಿತ್ಯ ವೀಕ್ಷಣೆ ಮಾಡುವುದರ ಮೂಲಕ ಅದರ ಸಮಸ್ಯೆಯನ್ನು ಗುರುತಿಕೊಂಡೆ.

3. **ಅಧ್ಯಯನದ ಅಗತ್ಯತೆ :-**

- ಭಾಷಾ ಪ್ರಭುತ್ವವನ್ನುಂಟು ಮಾಡುವುದು
- ಜ್ಞಾನಾಭಿವೃದ್ಧಿಯನ್ನುಂಟು ಮಾಡುವುದು
- ಮಕ್ಕಳು ಉತ್ತಮೋತ್ತಮ ಸಾಹಿತ್ಯ ಪರಿಚಯ ಮಾಡಿಕೊಳ್ಳುವಂತೆ ಮಾಡುವುದು
- ಮಕ್ಕಳು ಸ್ವತಂತ್ರವಾಗಿ ಗ್ರಂಥಗಳ ಓದಿ ಸಾಹಿತ್ಯಾನಂದವನ್ನು ಹೊಂದುವಂತೆ ಮಾಡುವುದು
- ವಿದ್ಯಾರ್ಥಿಗಳಲ್ಲಿ ಆಲೋಚನಾ ಶಕ್ತಿ ಮತ್ತು ವಿಮರ್ಶಾತ್ಮಕ ಶಕ್ತಿಯನ್ನುಂಟು ಮಾಡುವುದು
- ಮಕ್ಕಳಲ್ಲಿ ಓದುವ ಅಭಿರುಚಿನ್ನು ಬೆಳೆಸುವುದು
- ಮಕ್ಕಳಲ್ಲಿ ಉತ್ತಮ ವಕ್ತಿತ್ವ ಬೆಳೆಸುವುದು

10. **ತೀರ್ಮಾನ** :- ಸಂಶೋಧಕರು ಸಮಸ್ಯೆಗೆ ತಕ್ಕ ಸಾಧನಗಳನ್ನು ಉಪಯೋಗಿಸಿ ದತ್ತಾಂಶಗಳನ್ನು ಸಂಗ್ರಹಿಸಿ ವಿಶ್ಲೇಷಿಸಿದಾಗ ಸಂಶೋಧನೆಯ ಉದ್ದೇಶಗಳಿಗನುಗುಣವಾಗಿ ಪೂರ್ವ ಸಿದ್ಧಾಂತಗಳನ್ನು ಒರೆಹಚ್ಚಿ ನೋಡಿದಾಗ ತೀರ್ಮಾನ ಸೂಚಿಸಲು ಸಾಧ್ಯವಾಗುತ್ತದೆ. ಈ ತೀರ್ಮಾನಗಳನ್ನು ಧನಾತ್ಮಕ ಅಥವಾ ಋಣಾತ್ಮಕವಾಗಿರಬಹುದು ಅಂದರೆ ಸಿದ್ಧಾಂತಗಳು ಹೌದು ಅಥವಾ ಇಲ್ಲ ಎಂಬುದನ್ನು ನಿರ್ಧರಿಸುತ್ತವೆ.

8. **ದತ್ತಾಂಶ ಸಂಘಟನೆ ಮತ್ತು ವಿಶ್ಲೇಷಣೆ ಸಂಘಟನೆ** :– ಸಂಶೋಧನೆಗೆ ಸಂಗ್ರಹಿಸಿದ ಮಾಹಿತಿಯು ಕಚ್ಚಾ ಸ್ಥಿತಿಯಲ್ಲಿರುತ್ತದೆಅದನ್ನು ಕ್ರಮಬದ್ಧಗೊಳಿಸುವುದು ಮತ್ತು ಸಂಘಟಿಸುವುದು ಅವಶ್ಯಕ.

- ಪರಿಷ್ಕರಿಸುವುದು
- ವರ್ಗೀಕರಿಸುವುದು
- ಪಟ್ಟಿಮಾಡುವುದು

9. **ವಿಶ್ಲೇಷಣೆ** :– ಸಂಗ್ರಹಿಸಿದ ದತ್ತಾಂಶಗಳ ಅರ್ಥವನ್ನು ಕಂಡುಹಿಡಿಯಲು ವಿಶ್ಲೇಷಣೆ ಮಾಡಲಾಗುತ್ತದೆ. ಅಂದರೆ ಗಣನೆ ಮಾಡಿದ ವಿಷಯವನ್ನು ಅಭ್ಯಾಸ ಮಾಡುವುದು. ಸಂಕೀರ್ಣವಿಷಯವನ್ನು ಸಣ್ಣ ಭಾಗದ ಸರಳ ಭಾಗಗಳನ್ನಾಗಿ ಮಾಡಿ ಅವುಗಳನ್ನು ನಿರೂಪಿಸಬೇಕು.

- ಸಂಗ್ರಹಿಸಿದ ವಿಷಯವನ್ನು ವಿಶ್ಲೇಷಿಸಲು ಸಂಖ್ಯಾಶಾಸ್ತ್ರದ ಪದ್ಧತಿಗಳನ್ನು ಉಪಯೋಗಿಸಬೇಕು ಅವುಗಳೆಂದರೆ,
- ನಕ್ಷೆ ನಿರೂಪಣೆ
- ಕೇಂದ್ರಿಯ ಆವೃತ್ತಿ ಮಾಪನಗಳು
- ಹರವಿನ ಮಾಪನಗಳು
- ಸಹಸಂಬಂಧಗಳು

**ಅ) ಸಾಧನಗಳು/ವಿಚಾರಣಾ ನಮೂನೆಗಳು**

- ಪ್ರಶ್ನಾವಳಿ
- ತಾಳೆಪಟ್ಟಿ
- ತನಿಖಾಪಟ್ಟಿ
- ದರ್ಜಾಮಾಪನಿ
- ಅಂಕದ ಕಾಗದ
- ಬ) ನಿರೀಕ್ಷಣಾ ತಂತ್ರಗಳು
- ಕ) ಸಂದರ್ಶನ
- ಡ) ಸಮಾಜಮಿತಿ ತಂತ್ರ
- ಇ) ಮನೋವೈಜ್ಞಾನಿಕ ಪರೀಕ್ಷಣಗಳು
- ಸಾಧನ ಪರೀಕ್ಷಣ
- ಅಭಿಕ್ಷಮತ ಪರೀಕ್ಷಣ
- ಬುದ್ಧಿಶಕ್ತಿ ಪರೀಕ್ಷಣ

6. **ಕ್ರಿಯಾತ್ಮಕ ಯೋಜನೆಯ ಬೆಳವಣಿಗೆ** :– ಸಂಶೋಧಕರು ಪೂರ್ವಸಿದ್ಧಾಂತಗಳನ್ನು ರಚಿಸಿ ಅವುಗಳನ್ನು ಪರೀಕ್ಷಿಸಲು ಬರೆಯುವನು. ಆದ್ದರಿಂದ ಸಂಶೋಧಕನು ಈ ಸಿದ್ಧಾಂತಗಳನ್ನು ಪರೀಕ್ಷಿಸಲು ಯೋಜನೆಯನ್ನು ರೂಪಿಸುವನು.

- ಯೋಜನೆಯು ಚಟುವಟಿಕೆಗಳ ವಿವರಣೆಯನ್ನು ಒಳಗೊಂಡಿರುತ್ತದೆ. ಅಲ್ಲದೇ ಮಾಹಿತಿ ಸಂಗ್ರಹಿಸುವ ವಿಧಾನವನ್ನು ಒಳಗೊಂಡಿರುತ್ತದೆ
- ಇದು ಆಧಾರಗಳನ್ನು ಮತ್ತು ಸಾಧನೆಗಳನ್ನು ಒಳಗೊಂಡಿರುತ್ತದೆ
- ಕ್ರಿಯಾತ್ಮಕ ಸಂಶೋಧನೆಯನ್ನು ಮುಕ್ತಾಯಗೊಳಿಸಲು ಬೇಕಾಗುವ ದಿನಗಳನ್ನು ಇದು ಒಳಗೊಂಡಿರುತ್ತದೆ

7. **ಮಾಹಿತಿ ಸಂಗ್ರಹಣೆ** :– ವಿಷಯ ಸಂಗ್ರಹಣೆಯು ಪ್ರತಿಯೊಂದು ಅಭ್ಯಾಸಕ್ಕೂ ಅವಶ್ಯಕ. ಈ ಸಂಗ್ರಹಣೆಯನ್ನು ನೇರವಾಗಿ ಇಲ್ಲವೇ ಹಲವು ಆಧಾರಗಳ ಮೂಲಕ ದೊರಕಿಸಿಕೊಳ್ಳಬಹುದು. ಈ ಮೂಲ ಸಂಗತಿಗಳನ್ನು ಸುವ್ಯವಸ್ಥಿತವಾಗಿ ಮತ್ತು ಕ್ರಮಬದಧವಾಗಿ ಸಂಗ್ರಹಿಸಬೇಕು.

4. **ಉದ್ದೇಶಗಳನ್ನು ನಿರೂಪಿಸುವುದು** :– ಈ ಹಂತದಲ್ಲಿ ಉಪಾಧ್ಯಾರು ಈ ಗಾಗಲೇ ತಾವು ನಿರ್ದಿಷ್ಟಗೊಳಿಸಿದ ಸಮಸ್ಯೆಯನ್ನು ಕುರಿತು ಸರಿಯಾದ ದಿಕ್ಕಿನಲ್ಲಿ ಯೋಚಿಸಿ ಸಮಸ್ಯೆಯ ಪರಿಹಾರಕ್ಕೆ ಸೂಕ್ತವಾದ ಉದ್ದೇಶಗಳನ್ನು ರೂಪಿಸಿಕೊಳ್ಳಬೇಕು ನಿರೂಪಿಸುವ ಉದ್ದೇಶಗಳು ಲಭ್ಯವಿರುವ ಕಾಲದಲ್ಲಿ ಸಾಧಿಸಲು ಸಾಧ್ಯವಾಗುವಂತಹ ಒಂದೆರಡು ನಿರ್ದಿಷ್ಟ ಉದ್ದೇಶಗಳನ್ನು ರೂಪಿಸಬೇಕು.

5. **ಕ್ರಿಯಾ ಆಧಾರ ಕಲ್ಪನೆಯ ರಚನೆ** :– ಸಂಶೋಧಕರು ಸಂಶೋಧನೆಯ ಪೂರ್ವದಲ್ಲಿ ಸಮಸ್ಯೆಯ ಕಾರಣಗಳನ್ನು ಹುಡುಕಬೇಕಾಗುತ್ತದೆ. ನಂತರ ಸಮಸ್ಯೆಯ ಪರಿಹಾರದ ಬಗ್ಗೆ ಊಹೆ ಮಾಡಬೇಕು. ಈ ಊಹೆಗಳನ್ನು ಪೂರ್ವಸಿದ್ಧಾಂತಗಳ ರೂಪದಲ್ಲಿ ಬರೆಯಬೇಕಾಗುತ್ತದೆ. ಪೂರ್ವಸಿದ್ಧಾಂತಗಳು ಸಮಸ್ಯೆಯ ಪರಿಹಾರವನ್ನು ಪ್ರಯೋಗಾರ್ಥವಾಗಿ ಊಹಿಸುತ್ತವೆ. ಪೂರ್ವ ಸಿದ್ಧಾಂತದ ಮೊದಲ ಭಾಗ ಹೀಗೆ ಮಾಡಿದರೆ ಎಂದು ಹೇಳಿದರೆ ಉತ್ತರ ಭಾಗ ಹೀಗೆ ಆಗುತ್ತದೆ ಅಥವಾ ಆಗಬಹುದು ಎಂದು ತಿಳಿಸುತ್ತದೆ.

- **ಉದಾ** : ವಿದ್ಯಾರ್ಥಿಗಳಿಗೆ ಪ್ರಾರಂಭದಲ್ಲಿ ನೋಡಿ ಬರೆಯುವ ಚಟುವಟಿಕೆಯನ್ನು ಕೊಡುವ ಮೂಲಕ ಅವರ ಬರವಣಿಗೆಯ ಕಾಗುಣಿತ ದೋಷಗಳನ್ನು ಕಡಿಮೆ ಮಾಡಬಹುದು.

2. **ಸಮಸ್ಯೆಯನ್ನು ನಿರ್ದಿಷ್ಟಗೊಳಿಸುವುದು** :- ಈಗಾಗಲೇ ಸಮಸ್ಯೆಯ ಕ್ಷೇತ್ರವನ್ನು ಗುರ್ತಿಸಲಾಗಿದ್ದು ಸಮಸ್ಯೆಯ ಕ್ಷೇತ್ರವನ್ನು ಅಧ್ಯಯನ ಮಾಡಿ ಅರ್ಥಮಾಡಿಕೊಂಡು ನಿರ್ದಿಷ್ಟ ಸಮಸ್ಯೆಯ ಕ್ಷೇತ್ರದಲ್ಲಿ ಕಂಡುಬರುವ ಹಲವು ದೋಷಗಳಲ್ಲಿ ಆಧ್ಯತೆಯ ಮೇಲೆ ಒಂದು ನಿರ್ದಿಷ್ಟ ಸಮಸ್ಯೆಯನ್ನು ಗುರ್ತಿಸಿ ರೂಪಿಸಿಕೊಳ್ಳುವುದನ್ನು ಸಮಸ್ಯೆಯ ಸೂಕ್ಷ್ಮಗೊಳಿಸುವಿಕೆ ಎನ್ನಬಹುದು.

3. **ಸಮಸ್ಯೆಯ ಸಂಭವನೀಯ ಕಾರಣಗಳ ವಿಶ್ಲೇಷಣೆ** :- ನಿರ್ದಿಷ್ಟಗೊಳಿಸಿರುವ ಸಮಸ್ಯೆಗೆ ಸಾಮಾನ್ಯವಾಗಿ ಇರಬಹುದಾದ ಸಂಭವನೀಯ ಕಾರಣಗಳನ್ನು ಈ ಹಂತದಲ್ಲಿ ಗುರುತಿಸಿ ವಿಶ್ಲೇಷಿಸಲಾಗುವುದು. ಸಮಸ್ಯೆಯನ್ನು ಸೂಕ್ಷ್ಮವಾಗಿ ಗಮನಿಸಿ ವಿಶ್ಲೇಷಿಸಿ ಈ ಸಮಸ್ಯೆ ವಿದ್ಯಾರ್ಥಿಗಳೆಲ್ಲಾ ಹೇಗೆ ? ಎಷ್ಟರ ಮಟ್ಟಿಗೆ ಕಂಡುಬರುತ್ತಿದೆ ? ಎಂಬ ಬಗ್ಗೆ ಯೋಚಿಸಿ ಈ ಸಮಸ್ಯೆ ಸಂಭವಿಸಲು ಇರಬಹುದಾದ ಕಾರಣಗಳನ್ನು ಪಟ್ಟಿಮಾಡಿಕೊಂಡು ವಿಶ್ಲೇಷಿಸಬೇಕು. ಉಪಾಧ್ಯಾಯರು ತಮ್ಮ ಬೋಧನಾ ಅನುಭವ ವಿದ್ಯಾರ್ಥಿಗಳ ತರಗತಿಯ ಕಲಿಕಾ ಪ್ರಕ್ರಿಯೆ ಚಟುವಟಿಕೆಗಳ ವೀಕ್ಷಣೆಯಿಂದ ಸಮಸ್ಯೆಯ ಕಾರಣಗಳನ್ನು ಗುರುತಿಸಿಕೊಳ್ಳಬಹುದು.

**-:ಕ್ರಿಯಾ ಸಂಶೋಧನೆಯ ಹಂತಗಳು :-**

1. **ಸಮಸ್ಯೆಯ ಕ್ಷೇತ್ರವನ್ನು ಗುರುತಿಸುವುದು :-**

* ಉಪಾಧ್ಯಾಯರು ತರಗತಿಯಲ್ಲಿ ಬೋಧನಾ ಸಂದರ್ಭಗಳಲ್ಲಿ ಬೋಧನೆ ಕಲಿಕೆ ಪ್ರಕ್ರಿಯೆಯಲ್ಲಿ ಹಲವಾರು ಸಮಸ್ಯೆಗಳನ್ನು ಗುರುತಿಸಬಹುದು ಕೆಲವು ಸಮಸ್ಯೆಗಳು ವ್ಯಾಪಕವಾಗಿ ಇಡೀ ತರಗತಿಯ ಸಮಸ್ಯೆಗಳಾಗಿರಬಹುದು.

- ಉಪಾಧ್ಯಾಯರು ತಮ್ಮ ಸಾಮಾನ್ಯ ಜ್ಞಾನ ತರಗತಿಯ ವೀಕ್ಷಣೆಯ ಅನುಭವದಿಂದ ಸಮಸ್ಯೆಯ ಒಂದು ಕ್ಷೇತ್ರವನ್ನು ಗುರುತಿಸಬೇಕು.
- ವಿದ್ಯಾರ್ಥಿಗಳಲ್ಲಿ ಆಲಿಸುವಿಕೆ, ಓದುವ ಕ್ರಮ, ಬರವಣಿಗೆ, ವಾಕ್ಯರಚನೆ, ತಿಳುವಳಿಕೆಯ ಕೊರತೆ, ವಕ್ರವಾದ ಬರಹ ಇತ್ಯಾದಿ ಸಮಸ್ಯೆಗಳು

ಈ ರೀತಿ ಯಾವುದಾದರೊಂದು ಸಮಸ್ಯೆಯಿಂದಾಗಿ ಒಂದು ಸಂಪೂರ್ಣ ತರಗತಿಯನ್ನು ಆಯ್ದುಕೊಳ್ಳಬೇಕು ಮತ್ತು ಸಮಸ್ಯೆಯ ಬಗ್ಗೆ ಆಳವಾದ ಜ್ಞಾನ ಹೊಂದಿರಬೇಕಾಗುತ್ತದೆ.

## – : ಕ್ರಿಯಾತ್ಮಕ ಸಂಶೋಧನೆಯ ಗುಣಲಕ್ಷಣಗಳು :–

- **ಇದು ಮಕ್ಕಳಲ್ಲಿರುವ ಸಮಸ್ಯೆಯನ್ನು ಗುರುತಿಸುತ್ತದೆ**
- **ಮಕ್ಕಳಿಗೆ ಉತ್ತಮ ಮಾರ್ಗದರ್ಶನವಾಗಿದೆ**
- **ಮಕ್ಕಳಲ್ಲಿರುವ ಸಮಸ್ಯೆಯನ್ನು ಪರಿಹರಿಸಲು ಸಹಕರಿಸಿದೆ**
- **ಮಕ್ಕಳು ಹೆಚ್ಚು ಕಾರ್ಯದಲ್ಲಿ ತೊಡಗುತ್ತಾರೆ**
- **ಶಿಕ್ಷಕರು ಮಕ್ಕಳಿಗೆ ಮಾರ್ಗದರ್ಶನ ನೀಡಲು ಸೂಚಿಸುತ್ತದೆ**

- ವಿಶಾಲಾರ್ಥದಲ್ಲಿ ಇಂದಿನ ಬದಲಾಗುತ್ತಿರುವ ಸಮಾಜದಲ್ಲಿ ಪಠ್ಯ ಮತ್ತು ಪಠ್ಯೇತರ ವಸ್ತುವಿನ ಚಟುವಟಿಕೆಗಳನ್ನು ನಿರ್ಧರಿಸಲು ಸಹಾಯಕವಾಗಿದೆ.
- ಸಮಸ್ಯೆಗಳನ್ನು ಎದುರಿಸುತ್ತಿರುವ ಜನರೇ ಇದನ್ನು ಯೋಚಿಸಿ ಕಾರ್ಯಾಚರಣೆಗೆ ತಂದು ಮತ್ತು ಸಮಸ್ಯೆಗಳಿಗೆ ಯೋಗ್ಯ ಪರಿಹಾರೋಪಾಯಗಳನ್ನು ಕಂಡುಕೊಳ್ಳಬಹುದು. ಹೀಗಾಗಿ ಕ್ರಿಯಾತ್ಮಕ ಸಂಶೋಧನೆಯ ಬಳಕೆಯಲ್ಲಿ ತೊಂದರೆ ಎನಿಸುವುದಿಲ್ಲ.
- ಹೀಗೆ ಕ್ರಿಯಾತ್ಮಕ ಸಂಶೋಧನೆಯು ತನ್ನದೇ ಆದ ಮಹತ್ವದ ಪಾತ್ರವನ್ನು ಪಡೆದುಕೊಂಡಿದೆ.

- **ಕ್ರಿಯಾ ಸಂಶೋಧನೆಯ ಮಹತ್ವ :-**
- ವೈಜ್ಞಾನಿಕ ಮತ್ತು ವಸ್ತುನಿಷ್ಠ ತಳಹದಿಯ ಮೇಲೆ ಒಂದು ಸಂಸ್ಥೆ ಕೆಲಸ ಮಾಡಲು ಇದು ಸಹಾಯಕವಾಗಿದೆ.
- ಕ್ರಿಯಾತ್ಮಕ ಸಂಶೋಧನೆಯಿಂದ ಶೈಕ್ಷಣಿಕ ಜ್ವಲಂತ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಹುಡುಕಿ ಶೈಕ್ಷಣಿಕ ಧ್ಯೇಯೋದ್ದೇಶಗಳಿಗೆ ಯೋಗ್ಯ ಪದ್ಧತಿಯನ್ನು ತಯಾರಿಸಬಹುದು.
- ಕ್ರಿಯಾತ್ಮಕ ಸಂಶೋಧನೆಯನ್ನು ತಿಳಿದುಕೊಳ್ಳಲು ಅಥವಾ ಅರತುಕೊಳ್ಳಲು ಮತ್ತು ಅನ್ವಯಿಸಲು ಸುಲಭವಾಗಿದೆ.
- ಕ್ರಿಯಾತ್ಮಕ ಸಂಶೋಧನೆಯು ಕಾರ್ಯನಿರ್ವಹಿಸುವ ವ್ಯಕ್ತಿಗಳಲ್ಲಿ ಸಹಕಾರ ಮನೋಭಾವವನ್ನು ಬೆಳೆಸುತ್ತವೆ.
- ಶಿಕ್ಷಕರು ಶೈಕ್ಷಣಿಕ ಸಮಸ್ಯೆಗಳನ್ನು ಮತ್ತು ಸಂಶೋಧನಾ ತಂತ್ರಗಳನ್ನು ತಿಳಿದುಕೊಳ್ಳಲು ಸಹಾಯಕವಾಗಿದೆ.

- ಶಿಕ್ಷಕರು ತರಗತಿ ಸಮಸ್ಯೆಗಳನ್ನು ಆಧರಿಸಿ ಕ್ರಿಯಾ ಸಂಶೋಧನೆ ಕೈಗೊಳ್ಳುವುದರಿಂದ ಇಲ್ಲಿನ ಫಲಿತಾಂಶಗಳು ಆಯಾ ತರಗತಿ ಮಕ್ಕಳಿಗೆ ನೇರವಾಗಿ ಅನ್ವಯುವಾಗುತ್ತದೆ.
- ಶಿಕ್ಷಣ ಕ್ಷೇತ್ರದಲ್ಲಿ ಈಗಾಗಲೇ ಆಗಿರುವ ಮೂಲ ಸಂಶೋಧನೆಗಳ ಜ್ಞಾನ ಹಾಗೂ ಸಿದ್ಧಾಂತಗಳನ್ನು ನಿರ್ದಿಷ್ಟ ಕ್ಷೇತ್ರ ಹಾಗೂ ಚಟುವಟಿಕೆಗಳಿಗೆ ಅನ್ವಯ ಮಾಡಿ ಲಾಭ ಪಡೆಯಲು ಕ್ರಿಯಾ ಸಂಶೋಧನೆಯ ನೆರವಾಗುತ್ತದೆ.
- ಕಾಲ, ಶ್ರಮ, ಹಣದ ಅಪವ್ಯಯವನ್ನು ತಡೆದು ಶೈಕ್ಷಣಿಕ ಚಟುವಟಿಕೆಗಳನ್ನು ಹೆಚ್ಚು ಫಲಪ್ರದವಾಗಿ ಆಕರ್ಷಕವಾಗಿ ರೂಪಿಸಿ ಅನುಷ್ಠಾನಗೊಳಿಸಲು ಸಹಾಯಕ.

- ಮೂಲಭೂತ ಸಂಶೋಧನೆಗಳು ರೂಪಿಸುವ ಹೊಸ ಜ್ಞಾನ ಮತ್ತು ಸೂತ್ರಗಳನ್ನು ನಿರ್ದಿಷ್ಟ ಕಾರ್ಯಕ್ಷೇತ್ರಗಳಿಗೆ ಅನ್ವಯ ಮಾಡಲು ಕ್ರಿಯಾ ಸಂಶೋಧನೆ ನೆರವಾಗುತ್ತದೆ.
- ಕ್ರಿಯಾ ಸಂಶೋಧನೆಯ ತಿಳುವಳಿಕೆಯಿಂದ ಒಂದು ಕ್ರಿಯಾ ಚಟುವಟಿಕೆ ನಡೆಯುತ್ತಿರುವ ರೀತಿಯನ್ನು ಅರ್ಥ ಮಾಡಿಕೊಳ್ಳಲು ಸಹಾಯಕ.
- ತರಗತಿಯ ಬೋಧನೆ ಕಲಿಕಾ ಪ್ರಕ್ರಿಯೆಯ ಪರಿಣಾಮಕಾರಿಯನ್ನು ಅರ್ಥ ಮಾಡಿಕೊಳ್ಳಲು ನೆರವಾಗುತ್ತದೆ.
- ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಕಲಿಕಾ ಕೌಶಲಗಳು ಮತ್ತು ಕ್ರಮವನ್ನು ಪ್ರಯೋಗಾತ್ಮಕವಾಗಿ ನಿರಂತರ ಮೌಲ್ಯಮಾಪನ ಮಾಡಿಕೊಳ್ಳುತ್ತಾ ಬೋಧನಾ ಕಾರ್ಯದ ಗುಣಮಟ್ಟವನ್ನು ಉತ್ತಮಗೊಳಿಸಬಹುದು.

- **ಜೆ.ಬಿ ಬೆಸ್ಟ್‌ರವರ ಪ್ರಕಾರ** :– ಕ್ರಿಯಾ ಸಂಶೋಧನೆಯು ಸಮಸ್ಯೆಗೆ ತಕ್ಷಣ ಪರಿಹಾರ ಕಂಡುಹಿಡಿಯುವ ಕ್ರಿಯೆಯಾಗಿದ್ದು ಇಲ್ಲಿ ಯಾವುದೇ ಶಾಶ್ವತ ಸಿದ್ಧಾಂತಗಳನ್ನು ರೂಪಿಸುವುದಿಲ್ಲ. ವ್ಯಕ್ತಿಯ ಕಾರ್ಯ ಪ್ರಕ್ರಿಯೆಯಲ್ಲಿ ಆಗಿಂದಾಗ್ಗೆ ಸಂಭವಿಸುವ ನಿಜವಾದ ಸಮಸ್ಯೆಗಳನೇ ಇಲ್ಲಿ ಕೈಗೆತ್ತಿಕೊಳ್ಳಲಾಗುತ್ತದೆ.
- ಒಂದು ಕಾರ್ಯಕ್ಷೇತ್ರದಲ್ಲಿ ನಾವು ಮಾಡಬೇಕಾದ ಕಾರ್ಯಕ್ಕೆ ತಕ್ಷಣ ಪರಿಹಾರ ಕಂಡುಹಿಡಿಯುವ ಪ್ರಕ್ರಿಯೆಯಾಗಿದ್ದು ಅದಕ್ಕಾಗಿ ವಿವಿಧ ವಿಧಾನಗಳನ್ನು ಅನುಸರಿಸಿ ತಕ್ಷಣ ಪರಿಹಾರ ಕಾರ್ಯ ಕೈಗೊಳ್ಳುವುದೇ ಕ್ರಿಯಾ ಸಂಶೋಧನೆ.
- ನಮ್ಮ ಎಲ್ಲಾ ಕಾರ್ಯಕ್ಷೇತ್ರಗಳಲ್ಲಿಯೂ ಸಮಸ್ಯೆಗಳು ಉದ್ಭವಿಸುತ್ತವೆ. ಈ ಸಮಸ್ಯೆಗಳಿಂದಾಗಿ ನ್ನ ಕೆಲಸ ಸಮರ್ಪಕವಾಗಿ ಸಾಗುವುದಿಲ್ಲ. ಇದರಿಂದ ನಿರೀಕ್ಷಿತ ಮಟ್ಟದ ಫಲಗಳನ್ನು ಕಾಣುವುದಿಲ್ಲ.
- ಕ್ರಿಯಾ ಸಂಶೋಧನೆಯಿಂದ ವ್ಯಕ್ತಿಯು ತನ್ನ ವೃತ್ತಿ ಪರಿಸ್ಥಿತಿ ಹಾಗೂ ಸಾಮರ್ಥ್ಯಗಳನ್ನು ಉತ್ತಮಗೊಳಿಸಿಕೊಳ್ಳಬಹುದು.

- **ಕ್ರಿಯಾ ಸಂಶೋಧನೆಯ ಅರ್ಥ** :-

- ಸಾಮಾನ್ಯ ಅರ್ಥದಲ್ಲಿ ಹೇಳುವುದಾದರೆ ಒಂದು ಸಮಸ್ಯೆಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಪರಿಹಾರವನ್ನು ಕಂಡುಹಿಡಿಯುವುದು ಅಥವಾ ಒಂದು ಅಂಶದ ಬಗ್ಗೆ ಹೊಸ ಜ್ಞಾನವನ್ನು ಸೃಷ್ಟಿಸುವ ವೈಜ್ಞಾನಿಕ ಪ್ರಯತ್ನ ಮತ್ತು ಕ್ರಿಯೆಯನ್ನು ಸಂಶೋಧನೆ ಎನ್ನುವರು.

- ಕ್ರಿಯಾ ಸಂಶೋಧನೆಯ ಪ್ರತಿಪಾದಕ "ಸ್ಟೀವನ್ ಎಂ. ಕೋರೆರವರು" ಸಾಮಾನ್ಯ ಅರ್ಥದಲ್ಲಿ ಹೇಳುವುದಾದರೆ ವ್ಯಕ್ತಿಯೊಬ್ಬನು ತನ್ನ ಕಾರ್ಯಕ್ಷೇತ್ರದಲ್ಲಿ ಎದುರಾಗಿರುವ ಸಮಸ್ಯೆಗಳಿಗೆ ತಾನೇ ತಕ್ಷಣ ಸರಳ ಸಂಶೋಧನೆ ಕೈಗೊಂಡು ಸಮಸ್ಯೆಗೆ ಪರಿಹಾರ ಮಾರ್ಗಗಳನ್ನು ಕಂಡುಕೊಂಡು ಕಾರ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಕೈಗೊಳ್ಳುವ ವೈಜ್ಞಾನಿಕ ಕಾರ್ಯವೇ ಕ್ರಿಯಾ ಸಂಶೋಧನೆ.

- **ಉಪಸಂಹಾರ** :- ಕ್ರಿಯಾತ್ಮಕ ಸಂಶೋಧನೆಯು ಪ್ರಗತಿಪರ ಚಟುವಟಿಕೆಯಾಗಿದ್ದು, ಸಮಸ್ಯೆಗಳನ್ನು ಅಧ್ಯಯನ ಮಾಡಿ ಪರಿಹಾರೋಪಾಯಗಳನ್ನು ಸೂಚಿಸುತ್ತದೆ. ಕ್ರಿಯಾತ್ಮಕ ಸಂಶೋಧನೆಯ ಸಮಸ್ಯೆಗಳು ಅತೀ ಚಿಕ್ಕವು ಮತ್ತು ಕಡಿಮೆ ಸಮಯದಲ್ಲಿ ಕೈಗೊಳ್ಳುವಂತಹುಗಳಾಗಿವೆ.
- ಶಿಕ್ಷಣದಲ್ಲಿ ಹೊಸ ಬೋಧನಾ ಪದ್ಧತಿಯ ಅನ್ವಯ ಸಮಸ್ಯೆ ಮಕ್ಕಳ ಕಲಿಕೆಯಲ್ಲಿ ಉಂಟಾದ ಸಮಸ್ಯೆಗಳು ಕಲಿಕೆಗೆ ಪ್ರಚೋದನೆಗಳು ಮತ್ತು ಕಾರಣಗಳು ವರ್ಗಕೋಣೆಯಲ್ಲಿ ಮಕ್ಕಳ ಹೊಂದಾಣಿಕೆ ಮಕ್ಕಳ ಶೈಕ್ಷಣಿಕ ಸಮಸ್ಯೆಯ ಕಾರಣಗಳು
- ಭಾಷೆಯಲ್ಲಿ ಮಾಡುವ ಕಾಗುಣಿತ ದೋಷಗಳು ಇತ್ಯಾದಿ ಸಮಸ್ಯೆಗಳಿಗೆ ಶಿಕ್ಷಕರು, ಮುಖ್ಯೋಪಾಧ್ಯಾಯರು, ಆಡಳಿತಗಾರರು ಮೇಲ್ವಿಚಾರಕರು ಮತ್ತು ತಜ್ಞರು ಪರಿಹಾರೋಪಾಯಗಳನ್ನು ಕಂಡುಕೊಳ್ಳುವಲ್ಲಿ ಈ ಪದ್ಧತಿಯು ಬಹಳ ಮಹತ್ವದ ಪಾತ್ರವನ್ನು ವಹಿಸುತ್ತದೆ.
- ಕ್ರಿಯಾತ್ಮಕ ಸಂಶೋಧನೆಯ ತಾತ್ವಿಕ ಬೆಳವಣಿಗೆ ಅಥವಾ ಸಾಮಾನ್ಯೀಕರಿಸುವುದಕ್ಕಿಂತ ತತ್‌ಕ್ಷಣದ ಅಧ್ಯಯನಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತದೆ. ಇದರ ಪರಿಣಾಮಗಳನ್ನು ಸ್ಥಾನಿಕ ಅನ್ವಯದ ದೃಷ್ಟಿಯಿಂದ ನೋಡಲಾಗುತ್ತದೆಯೇ ವಿನಃ ಸಾರ್ವತ್ರಿಕವಾಗಿ ಅಲ್ಲ.

11. ಸಂಭವನೀಯ ಕಾರಣಗಳ ಪಟ್ಟಿ
12. ಕ್ರಿಯಾ ಸಂಶೋಧನೆಯ ಕಾರ್ಯ
13. ವಿಶ್ಲೇಷಣೆ ಮತ್ತು ಅರ್ಥೈಸುವಿಕೆ
14. ಅಧ್ಯಯನದ ಫಲಿತಾಂಶ
15. ಅಧ್ಯಯನದ ಪ್ರತಿಫಲನ
16. ಉಪಸಂಹಾರ
17. ಆಧಾರ ಗ್ರಂಥಗಳು
18. ಅನುಬಂಧ